# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :653**

**ಮಾನ್ಯ ಸದಸ್ಯರ ಹೆಸರು :ಡಾ|| ಎಂ.ಜಿ.ಮುಳೆ**

**(ವಿಧಾನಸಭೆಯಿಂದ ಚುನಾಯಿತರಾದವರು)**

**ಉತ್ತರಿಸುವ ದಿನಾಂಕ :20.08.2026**

**ಉತ್ತರಿಸುವ ಸಚಿವರು :ಗೃಹ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ (ವಿಶೇಷವಾಗಿ ಬೆಂಗಳೂರಿನಲ್ಲಿ) ಸೈಬರ್ ಅಪರಾಧಗಳು ತೀವ್ರವಾಗಿ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಳೆದ 3 ವರ್ಷಗಳಲ್ಲಿ ದಾಖಲಾದ ಒಟ್ಟು ಪ್ರಕರಣಗಳು ಹಾಗೂ ಸಾರ್ವಜನಿಕರು ಕಳೆದುಕೊಂಡ ಹಣ ಎಷ್ಟು; | ಕಳೆದ 3 ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ಸೈಬರ್ ಅಪರಾಧ ಪ್ರಕರಣಗಳು ದಾಖಲಾದ ಹಾಗೂ ಸಾರ್ವಜನಿಕರು ಕಳೆದುಕೊಂಡ ಮೊತ್ತದ ವಿವರಗಳು ಈ ಕೆಳಕಂಡತಿದೆ: |

**ಬೆಂಗಳೂರು ನಗರ**

| ವರ್ಷ | ದಾಖಲಾದ ಸೈಬರ್ ಪ್ರಕರಣಗಳ ಸಂಖ್ಯೆ | ಸಾರ್ವಜನಿಕರು ಕಳೆದುಕೊಂಡ ಮೊತ್ತದ ವಿವರ (ರೂ.ಗಳಲ್ಲಿ) |
|---|---|---|
| 2024 | 17890 | 18,41,73,30,549 |
| 2025 | 10703 | 17,56,64,62,659 |
| 2026 ಜುಲೈ | 4712 | 558,01,99,632 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ದಾಖಲಾದ ಪ್ರಕರಣಗಳ ಪೈಕಿ ಎಷ್ಟು ಮೊತ್ತದ ಹಣವನ್ನು ಫ್ರೀಜ್ ಮಾಡಿ/ಜಪ್ತಿ ಮಾಡಿ ಸಂತ್ರಸ್ತರಿಗೆ ಹಿಂತಿರುಗಿಸಲಾಗಿದೆ; (ವಿವರ ನೀಡುವುದು) | ಕಳೆದ 03 ವರ್ಷಗಳಲ್ಲಿ ಸೈಬರ್ ಅಪರಾಧ ಪ್ರಕರಣಗಳ ಪೈಕಿ ವಶಪಡಿಸಿಕೊಂಡ ಮೊತ್ತ ಮತ್ತು ಸಂತ್ರಸ್ತರಿಗೆ ಹಿಂದಿರುಗಿಸಲಾದ ಮೊತ್ತದ ವಿವರ ಈ ಕೆಳಕಂಡಂತಿದೆ: |

**ಬೆಂಗಳೂರು ನಗರ**

| ವರ್ಷ | ಫ್ರೀಜ್ ಮಾಡಿ/ಜಪ್ತಿ ಮೊತ್ತದ ವಿವರ ರೂ.ಗಳಲ್ಲಿ | ಸಂತ್ರಸ್ತರಿಗೆ ಹಿಂದಿರುಗಿಸಲಾದ ಮೊತ್ತದ ವಿವರ (ರೂ.ಗಳಲ್ಲಿ) |
|---|---|---|
| 2024 | 257,76,36,389 | 1,83,65,39,621 |
| 2025 | 158,50,99,895 | 76,67,47,278 |
| 2026 ಜುಲೈ | 359,296,378 | 191,04,825 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಸಾವಿರಾರು ಪ್ರಕರಣಗಳು ಬಾಕಿ ಉಳಿಯಲು CEN ಠಾಣೆಗಳಲ್ಲಿ ತಜ್ಞ ತನಿಖಾಧಿಕಾರಿಗಳು ಹಾಗೂ ತಾಂತ್ರಿಕ ಉಪಕರಣಗಳ ಕೊರತೆಯೇ ಕಾರಣವೇ; ಖಾಲಿ | ಸೈಬರ್ ಅಪರಾಧ ಪ್ರಕರಣಗಳನ್ನು ತಾಂತ್ರಿಕವಾಗಿ ಮತ್ತು ವೈಜ್ಞಾನಿಕವಾಗಿ ತನಿಖೆ ನಿರ್ವಹಿಸಲು 06 ಡಿಜಿಟಲ್ ಫಾರೆನ್ಸಿಕ್ ಅನಾಲಿಸ್ಟ್ ಹುದ್ದೆಗೆ 02 ಸೈಬರ್ ಸೆಕ್ಯೂರಿಟಿ ಅನಾಲಿಸ್ಟ್ ಹುದ್ದೆಗೆ ಒಟ್ಟು 08 ತಾಂತ್ರಿಕ ತಜ್ಞರನ್ನು ಪೊಲೀಸ್ ಆಯುಕ್ತರು ಬೆಂಗಳೂರು |

| | | |
|---|---|---|
| | ಇರುವ ಹುದ್ದೆಗಳ ಮಾಹಿತಿ ಒದಗಿಸುವುದು; | ನಗರ ಘಟಕಕ್ಕೆ ನೇಮಕ ಮಾಡಲಾಗಿರುತ್ತದೆ ಪೊಲೀಸ್ ಠಾಣೆಗಳಿಗೆ ಅಗತ್ಯವಿರುವ ತಾಂತ್ರಿಕ ಉಪಕರಣಗಳನ್ನು ಒದಗಿಸಲಾಗಿರುತ್ತದೆ.<br><br>ಸೈಬರ್ ಅಪರಾಧ ಪ್ರಕರಣಗಳಲ್ಲಿ ತನಿಖೆಯನ್ನು ತಾಂತ್ರಿಕವಾಗಿ/ವೈಜ್ಞಾನಿಕವಾಗಿ ನಿರ್ವಹಿಸಲು CEN ಪೊಲೀಸ್ ಠಾಣೆಯ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗಿರುತ್ತದೆ.<br><br>**ತನಿಖೆಯಲ್ಲಿರುವ ಪ್ರಕರಣಗಳನ್ನು ಇತ್ಯರ್ಥ ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:**<br><br>• ಸೈಬರ್ ಪ್ರಕರಣಗಳನ್ನು ಇತ್ಯರ್ಥಪಡಿಸಲು ಆಧುನಿಕ ತಂತ್ರಜ್ಞಾನ ಹೊಂದಿರುವ ಉಪಕರಣಗಳನ್ನು ಬಳಸಲಾಗುತ್ತಿದೆ ಹಾಗೂ ಆಧುನಿಕ ವಿದ್ಯುನ್ಮಾನ ತಾಂತ್ರಿಕ ಉಪಕರಣಗಳನ್ನು ಬಳಸಲು ಸಿಬ್ಬಂದಿಗಳಿಗೆ ವಿಶೇಷ ತರಬೇತಿಯನ್ನು ಸಹ ಒದಗಿಸಲಾಗಿದೆ.<br><br>• ಸಿಐಡಿ ಕಛೇರಿಯಲ್ಲಿ ಈಗಾಗಲೇ ಸಿ.ಎಫ್.ಯು (ಸೈಬರ್ ಫಾರೆನ್ಸಿಕ್ ಯುನಿಟ್) ವಿಭಾಗವು ಹಿರಿಯ ಅಧಿಕಾರಿಗಳ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಿ.ಎಫ್.ಯು ವಿಭಾಗದ ಸೈಬರ್ ಲ್ಯಾಬ್‌ನಲ್ಲಿ ಆಧುನಿಕ ತಂತ್ರಜ್ಞಾನ ಸಲಕರಣೆಗಳನ್ನು ಬಳಸಿಕೊಂಡು ಸಿಎಫ್‌ಯು ವಿಭಾಗವು ಕರ್ನಾಟಕ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೊಲೀಸ್ ಠಾಣೆಗಳ ಪ್ರಕರಣಗಳಲ್ಲಿನ ತನಿಖೆಯಲ್ಲಿ ತಾಂತ್ರಿಕ ಸಹಾಯವನ್ನು ಒದಗಿಸಲಾಗುತ್ತಿದೆ.<br><br>• ಡಿಜಿಟಲ್ ಪ್ರಯೋಗಾಲಯಗಳು ಸೈಬರ್ ಅಪರಾಧಕ್ಕೆ ಸಂಬಂಧಿಸಿದ ಡಿಜಿಟಲ್ ಸಾಕ್ಷಿ ವಿಶ್ಲೇಷಣೆಗೆ ಸ್ಥಾಪಿಸಲಾಗಿದೆ.<br><br>• ಬೆಂಗಳೂರು ನಗರದಲ್ಲಿರುವ ರಾಜ್ಯ ಸೈಬರ್ ಫಾರೆನ್ಸಿಕ್ ಲ್ಯಾಬ್‌ನಲ್ಲಿ ಮೊಬೈಲ್, ನೆಟ್ವರ್ಕ್ ಫಾರೆನ್ಸಿಕ್ ಹಾಗೂ ಮಾಲ್‌ವೇರ್ ವಿಶ್ಲೇಷಣಾ ಸಾಮರ್ಥ್ಯ. Magnet AXIOM, Belkasoft, Cellebrite UFED, Oxygen Forensic Detective ಮುಂತಾದ ಅತ್ಯಾಧುನಿಕ ಸಾಧನಗಳು. ಪ್ರಾದೇಶಿಕ ಫಾರೆನ್ಸಿಕ್ ಲ್ಯಾಬ್‌ಗಳು ಸ್ಥಳೀಯ ತನಿಖಾ ಸಾಮರ್ಥ್ಯವನ್ನು ಬಲಪಡಿಸುತ್ತವೆ.<br><br>ರಾಜ್ಯದಲ್ಲಿ CEN ಪೊಲೀಸ್ ಠಾಣೆಗಳಲ್ಲಿ ಖಾಲಿ ಇರುವ ಹುದ್ದೆಗಳ ಮಾಹಿತಿಯನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. |
| ಈ) | ವಂಚನೆಗೊಳಗಾದ ಹಣವನ್ನು ತಕ್ಷಣವೇ ತಡೆಹಿಡಿಲು (Golden Hour) ಮತ್ತು ಬಾಕಿ ಕೇಸುಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಕೈಗೊಂಡಿರುವ ಕಾಲಮಿತಿ ಕ್ರಮಗಳೇನು? | **ವಂಚನೆಗೊಳಗಾದ ಹಣವನ್ನು ತಕ್ಷಣವೇ ತಡೆಹಿಡಿಯಲು (Golden Hour) ಮತ್ತು ಬಾಕಿ ಕೇಸುಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಕೈಗೊಂಡಿರುವ ಕ್ರಮಗಳ ವಿವರ ಈ ಕೆಳಕಂಡಂತಿದೆ:**<br><br>• ಕೇಂದ್ರ ಸರ್ಕಾರದ ಗೃಹ ಮಂತ್ರಾಲಯವು ಆರ್ಥಿಕ ಸ್ವರೂಪದ ಸೈಬರ್ ಅಪರಾಧವನ್ನು ತಡೆಗಟ್ಟಲು ಉಚಿತ |

| | | |
|---|---|---|
| | | ಸಹಾಯವಾಣಿ (ಟೋಲ್ ಫ್ರೀ) ಸಂ: 1930 ಸೇವೆಯನ್ನು ಪ್ರಾರಂಭಿಸಿರುತ್ತದೆ.<br><br>• ಸೈಬರ್ ವಂಚನೆ ಪ್ರಕರಣಗಳಲ್ಲಿ ವಂಚನೆಗೊಳಗಾದ ಹಣವನ್ನು ತಡೆಹಿಡಿಯಲು (Golden Hours), ವಂಚನೆ ನಡೆದ 1 ರಿಂದ 1.30 ತಾಸಿನೊಳಗಾಗಿ ವಂಚನೆಗೊಳಗಾದ ವ್ಯಕ್ತಿಯು ಪೊಲೀಸರಿಗೆ 112 ಅಥವಾ 1930 ಗೆ ತಕ್ಷಣ ದೂರು ನೀಡಿದಲ್ಲಿ ಕಳೆದುಕೊಂಡ ಹಣವನ್ನು (Lein/Freeze) ಮಾಡಿಸಿ ಮರಳಿ ಪಡೆಯುವ ಸಾಧ್ಯತೆಗಳು ಅಧಿಕವಾಗಿರುತ್ತದೆ.<br><br>• ಪ್ರಕರಣಗಳು ವರದಿಯಾದ ನಂತರ 60 ದಿನಗಳೊಳಗಾಗಿ ತನಿಖೆಯನ್ನು ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲು ಕ್ರಮ ವಹಿಸಲಾಗುತ್ತಿದೆ.<br><br>• ಇದಲ್ಲದೆ, ಬ್ಯಾಂಕ್‌ಗಳು, ಸೈಬರ್ ಕ್ರೈಂ ಘಟಕಗಳು, ಪೊಲೀಸ್ ಇಲಾಖೆಗಳು, ಹಣಕಾಸು ಸಂಸ್ಥೆಗಳು ಮತ್ತು ಸಂಬಂಧಿತ ಸರ್ಕಾರಿ ಸಂಸ್ಥೆಗಳ ನಡುವೆ ತ್ವರಿತ ಸಮನ್ವಯ ಸಾಧಿಸಿ, ಅಗತ್ಯವಿರುವ ದಾಖಲೆಗಳು ಮತ್ತು ಮಾಹಿತಿಯನ್ನು ವಿಳಂಬವಿಲ್ಲದೆ ಪಡೆದುಕೊಳ್ಳುವ ಕ್ರಮ ಕೈಗೊಳ್ಳಲಾಗುತ್ತದೆ. ತನಿಖೆ ಪೂರ್ಣಗೊಂಡ ನಂತರ ಕಾನೂನುಬದ್ಧ ಪ್ರಕ್ರಿಯೆಯಂತೆ ಹಣವನ್ನು ಮರಳಿ ಪಡೆಯಲು/ಬಿಡುಗಡೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.<br><br>• ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ಆದ್ಯತೆಯ ಮೇರೆಗೆ ಪರಿಶೀಲಿಸಿ, ಪ್ರಕರಣಗಳ ಪ್ರಸ್ತುತ ಸ್ಥಿತಿಯನ್ನು ದಾಖಲಿಸಿ ಹಾಗೂ ಅನಗತ್ಯ ವಿಳಂಬಕ್ಕೆ ಕಾರಣಗಳನ್ನು ಗುರುತಿಸಿ, ಅಗತ್ಯ ದಾಖಲೆಗಳು ಮತ್ತು ವರದಿಗಳನ್ನು ತಕ್ಷಣ ಪಡೆದು ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಬೇಕು ಮತ್ತು ದೀರ್ಘಕಾಲದಿಂದ ಬಾಕಿ ಇರುವ ಪ್ರಕರಣಗಳಿಗೆ ವಿಶೇಷ ಆದ್ಯತೆ ನೀಡಿ ಸಂಬಂಧಪಟ್ಟ ಅಧಿಕಾರಿಗಳು ನಿಗದಿತ ಕಾಲಮಿತಿಯಲ್ಲಿ ಪ್ರಕರಣಗಳನ್ನು ವಿಲೇವಾರಿ ಮಾಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿರುತ್ತದೆ. ಪ್ರತಿ ಪ್ರಕರಣದ ಪ್ರಗತಿಯನ್ನು ನಿಯಮಿತವಾಗಿ ಪರಿಶೀಲಿಸಿ, ಬಾಕಿ ಪ್ರಕರಣಗಳ ಸಂಖ್ಯೆ ಕಡಿಮೆಯಾಗುವಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.<br><br>• ಸೈಬರ್ ವಂಚಕರು ಹಣವನ್ನು ಬೇರೆ ಬೇರೆ ಬ್ಯಾಂಕ್ ಖಾತೆಗಳಿಗೆ (Mule accounts)ಗೆ ವರ್ಗಾಯಿಸುವ ಮೊದಲು ಅಥವಾ ಎಟಿಎಂ ಮೂಲಕ ಡ್ರಾ ಮಾಡುವ ಮುಂಚೆಯೇ ಆ ಬ್ಯಾಂಕ್ ಖಾತೆಗಳ ಮೇಲೆ ನಿರ್ಬಂಧ ಹೇರಲು ಸಹಕಾರಿಯಾಗುತ್ತದೆ ಹಾಗೂ ಸಂಬಂಧಪಟ್ಟ ಬ್ಯಾಂಕ್ ಅಥವಾ ಡಿಜಿಟಲ್ ವ್ಯಾಲೆಟ್‌ಗಳೊಂದಿಗೆ ನೈಜ ಸಮಯದಲ್ಲಿ ಸಂಪರ್ಕ ಸಾಧಿಸಿ ವಹಿವಾಟನ್ನು ರದ್ದುಗೊಳಿಸಲು ಸಹಕಾರಿಯಾಗುತ್ತದೆ.<br><br>• ಈ ಕುರಿತು ಈಗಾಗಲೇ ಸಾರ್ವಜನಿಕರಿಗೆ, ಮಾಧ್ಯಮಗಳು, ಸಭೆಗಳು ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಲಾಗಿರುತ್ತದೆ. |

| | | |
|---|---|---|
| | | • ಪ್ರಕರಣಗಳು ವರದಿಯಾದ ನಂತರ 60 ದಿನಗಳೊಳಗಾಗಿ ತನಿಖೆಯನ್ನು ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲು ಕ್ರಮ ವಹಿಸಲಾಗುತ್ತಿದೆ.<br><br>• ಸೈಬರ್ ಅಪರಾಧ ಪ್ರಕರಣಗಳನ್ನು ಸೈಬರ್ ಕ್ರೈಮ್ ಪೊಲೀಸ್ ಠಾಣೆಗಳಲ್ಲದೆ ನಗರದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳನ್ನು ದಾಖಲಿಸಿ ಶೀಘ್ರವಾಗಿ ತನಿಖೆ ಪೂರೈಸಿ ನಾಗರಿಕರ ದೂರುಗಳಿಗೆ ಸ್ಪಂದಿಸಲಾಗುತ್ತಿದೆ. |

ಸಂ.ಹೆಚ್‌ಡಿ 68 ಪಿಸಿಕ್ಯೂ 2026

(ಪ್ರಿಯಾಂಕ್ ಖರ್ಗೆ)
ಗೃಹ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ|| ಎಂ.ಜಿ.ಮುಳೆ ರವರ ಚುಕ್ಕೆ ಗುರುತಿನ ಪ್ರಶ್ನೆ**

**ಸಂಖ್ಯೆ: 653ಕ್ಕೆ ಸಂಬಂಧಿಸಿದ ಅನುಬಂಧ**

CEN POLICE STATION STRENGTH DETAILS

| | SANCTION | | | | | | | ACTUAL | | | | | | | VACANCY | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|
| UNITS | ACP | PI | PSI | ASI | CHC | CPC | TOTAL | ACP | PI | PSI | ASI | CHC | CPC | TOTAL | ACP | PI | PSI | ASI | CHC | CPC | TOTAL |
| **COP B'LORE CITY** | 9 | 11 | 46 | 55 | 120 | 312 | 553 | 9 | 11 | 43 | 53 | 116 | 121 | 353 | 0 | 0 | 3 | 2 | 4 | 191 | 200 |
| SP BANGALORE DIST. | 1 | 1 | 1 | 0 | 7 | 14 | 24 | 1 | 1 | 1 | 0 | 7 | 14 | 24 | 0 | 0 | 0 | 0 | 0 | 0 | 0 |
| SP TUMKUR DIST. | 1 | 1 | 1 | 1 | 7 | 10 | 21 | 1 | 0 | 1 | 1 | 7 | 10 | 20 | 0 | 1 | 0 | 0 | 0 | 0 | 1 |
| SP KOLAR DIST. | 1 | 1 | 1 | 1 | 5 | 8 | 17 | 1 | 1 | 0 | 0 | 5 | 7 | 14 | 0 | 0 | 1 | 1 | 0 | 1 | 3 |
| SP KGF DIST. | 1 | 1 | 1 | 0 | 5 | 13 | 21 | 0 | 1 | 1 | 0 | 2 | 5 | 9 | 1 | 0 | 0 | 0 | 3 | 8 | 12 |
| SP RAMANAGARA DIST. | 1 | 1 | 1 | 1 | 7 | 10 | 21 | 1 | 1 | 0 | 1 | 7 | 10 | 20 | 0 | 0 | 1 | 0 | 0 | 0 | 1 |
| SP CHICKABALLA PURA DIST. | 1 | 1 | 1 | 2 | 8 | 18 | 31 | 0 | 1 | 1 | 2 | 8 | 14 | 26 | 1 | 0 | 0 | 0 | 0 | 4 | 5 |
| **COP MYSORE CITY** | 1 | 1 | 1 | 0 | 6 | 15 | 24 | 1 | 1 | 1 | 0 | 6 | 15 | 24 | 0 | 0 | 0 | 0 | 0 | 0 | 0 |
| SP MYSORE DIST. | 1 | 1 | 1 | 0 | 7 | 20 | 30 | 1 | 1 | 1 | 0 | 7 | 11 | 21 | 0 | 0 | 0 | 0 | 0 | 9 | 9 |
| SP CHAMARAJNA GAR DIST. | 1 | 1 | 1 | 2 | 10 | 19 | 34 | 1 | 1 | 0 | 2 | 10 | 9 | 23 | 0 | 0 | 1 | 0 | 0 | 10 | 11 |
| SP HASSAN DIST. | 1 | 1 | 2 | 1 | 6 | 14 | 25 | 1 | 1 | 2 | 1 | 6 | 13 | 24 | 0 | 0 | 0 | 0 | 0 | 1 | 1 |
| SP KODAGU DIST. | 1 | 1 | 1 | 0 | 7 | 21 | 31 | 1 | 0 | 0 | 0 | 7 | 10 | 18 | 0 | 1 | 1 | 0 | 0 | 11 | 13 |
| SP MANDYA DIST. | 1 | 1 | 1 | 1 | 6 | 20 | 30 | 1 | 1 | 1 | 1 | 6 | 16 | 26 | 0 | 0 | 0 | 0 | 0 | 4 | 4 |
| SP DAVANGERE DIST. | 1 | 1 | 1 | 2 | 6 | 13 | 24 | 1 | 1 | 1 | 2 | 6 | 13 | 24 | 0 | 0 | 0 | 0 | 0 | 0 | 0 |
| SP SHIMOGA DIST. | 1 | 1 | 1 | 3 | 9 | 18 | 33 | 0 | 1 | 1 | 3 | 9 | 18 | 32 | 1 | 0 | 0 | 0 | 0 | 0 | 1 |
| SP CHITRADURGA DIST. | 1 | 1 | 1 | 2 | 6 | 13 | 24 | 0 | 1 | 1 | 2 | 4 | 11 | 19 | 1 | 0 | 0 | 0 | 2 | 2 | 5 |
| SP HAVERI DIST. | 1 | 1 | 1 | 1 | 5 | 18 | 27 | 1 | 1 | 1 | 1 | 5 | 12 | 21 | 0 | 0 | 0 | 0 | 0 | 2 | 2 |
| **COP MANGALORE CITY** | 1 | 1 | 3 | 2 | 14 | 30 | 51 | 0 | 1 | 3 | 2 | 14 | 21 | 41 | 1 | 0 | 0 | 0 | 0 | 9 | 10 |
| SP DK MANGALORE DIST. | 1 | 1 | 1 | 0 | 7 | 11 | 21 | 1 | 0 | 1 | 0 | 7 | 11 | 20 | 0 | 0 | 0 | 0 | 0 | 0 | 1 |
| SP UDUPI DIST. | 1 | 1 | 1 | 1 | 9 | 10 | 23 | 1 | 0 | 1 | 1 | 9 | 9 | 21 | 0 | 1 | 0 | 0 | 0 | 1 | 2 |
| SP UK KARWAR DIST. | 1 | 1 | 1 | 0 | 2 | 8 | 13 | 0 | 1 | 1 | 0 | 2 | 8 | 12 | 1 | 0 | 0 | 0 | 0 | 0 | 1 |
| SP CHIKMAGALU R DIST. | 1 | 1 | 1 | 1 | 9 | 10 | 23 | 1 | 1 | 1 | 1 | 9 | 10 | 23 | 0 | 0 | 0 | 0 | 0 | 0 | 0 |
| **COP HUBLI DHARWAD CITY** | 1 | 1 | 1 | 2 | 10 | 20 | 35 | 1 | 1 | 1 | 2 | 10 | 22 | 37 | 0 | 0 | 0 | 0 | 0 | -2 | -2 |
| **COP BELGAUM CITY** | 1 | 1 | 1 | 2 | 9 | 12 | 26 | 1 | 1 | 1 | 2 | 9 | 11 | 25 | 0 | 0 | 0 | 0 | 0 | 1 | 1 |
| SP BELGAUM DIST. | 1 | 1 | 1 | 2 | 5 | 15 | 25 | 1 | 1 | 1 | 2 | 5 | 13 | 23 | 0 | 0 | 0 | 0 | 0 | 2 | 2 |
| SP GADAG DIST. | 1 | 1 | 1 | 1 | 7 | 12 | 23 | 1 | 0 | 1 | 1 | 7 | 12 | 22 | 0 | 1 | 0 | 0 | 0 | 0 | 1 |

| CEN POLICE STATION STRENGTH DETAILS | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|
| | SANCTION | | | | | | | ACTUAL | | | | | | | VACANCY | | | | | | |
| UNITS | ACP | PI | PSI | ASI | CHC | CPC | TOTAL | ACP | PI | PSI | ASI | CHC | CPC | TOTAL | ACP | PI | PSI | ASI | CHC | CPC | TOTAL |
| | | | | | | | | | | | | | | | | | | | | | |
| SP DHARWAD DIST. | 1 | 1 | 1 | 1 | 8 | 20 | 32 | 1 | 1 | 1 | 1 | 8 | 5 | 17 | 0 | 0 | 0 | 0 | 0 | 15 | 15 |
| SP VIJAYAPURA DIST. | 1 | 1 | 1 | 0 | 9 | 11 | 23 | 1 | 1 | 1 | 0 | 9 | 11 | 23 | 0 | 0 | 0 | 0 | 0 | 0 | 0 |
| SP BAGALKOTE DIST. | 1 | 1 | 1 | 3 | 5 | 12 | 23 | 1 | 1 | 1 | 2 | 5 | 9 | 19 | 0 | 0 | 0 | 0 | 0 | 3 | 3 |
| **COP KALBURGI CITY** | 1 | 1 | 0 | 1 | 4 | 18 | 25 | 1 | 1 | 0 | 1 | 4 | 18 | 25 | 1 | 0 | 0 | 0 | 0 | 0 | 0 |
| SP KALBURGI DIST. | 1 | 1 | 1 | 1 | 5 | 10 | 19 | 0 | 1 | 1 | 1 | 5 | 10 | 18 | 1 | 0 | 0 | 0 | 0 | 0 | 1 |
| SP YADAGIRI DIST. | 1 | 1 | 1 | 1 | 5 | 7 | 16 | 0 | 1 | 0 | 1 | 5 | 6 | 13 | 1 | 0 | 1 | 0 | 0 | 1 | 3 |
| SP BIDAR DIST. | 1 | 1 | 1 | 0 | 4 | 8 | 15 | 1 | 0 | 0 | 0 | 4 | 8 | 13 | 0 | 1 | 1 | 0 | 0 | 0 | 2 |
| SP KOPPAL DIST. | 1 | 1 | 1 | 2 | 6 | 10 | 21 | 1 | 1 | 0 | 2 | 6 | 10 | 20 | 0 | 0 | 1 | 0 | 0 | 0 | 1 |
| SP RAICHUR DIST. | 1 | 1 | 1 | 1 | 6 | 16 | 26 | 1 | 1 | 1 | 1 | 5 | 10 | 19 | 0 | 0 | 0 | 0 | 1 | 6 | 7 |
| SP BELLARY DIST. | 1 | 1 | 1 | 0 | 5 | 15 | 23 | 0 | 1 | 0 | 0 | 5 | 13 | 19 | 1 | 0 | 1 | 0 | 0 | 2 | 4 |
| SP VIJAYANAGARA DIST. | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| TOTAL | 44 | 46 | 83 | 93 | 356 | 811 | 1433 | 35 | 40 | 72 | 89 | 346 | 526 | 1108 | 10 | 4 | 11 | 3 | 10 | 281 | 320 |